ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ದಿನಾಂಕ: 01.04.2025ರಂದು ನಡೆದ ಪ್ರಶಿಕ್ಷಣ ಪರಿಷತ್‌ನ 42ನೇ ಸಭೆಯ ನಡಾವಳಿಗಳು**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 42ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 01–04–2025**ರ ಮಂಗಳವಾರ ಮಧ್ಯಾಹ್ನ; 03.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀ ಶಶಿಧರ್ ಜಿ., ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು – ಸದಸ್ಯರು
3. ಶ್ರೀಮತಿ ಸತ್ಯವತಿ ಎಮ್., ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
4. ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕ.ಸಂ.ವಿ. – ಸದಸ್ಯರು
5. ಪ್ರೊ. ಸಿ. ಪಾಲಯ್ಯ, ಡೀನ್, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯ, ಕ.ಸಂ.ವಿ. – ಸದಸ್ಯರು
6. ಪ್ರೊ. ಶಿವಾನಿ ವಿ., ಡೀನ್, ಶಾಸ್ತ್ರ ನಿಕಾಯ, ಕ.ಸಂ.ವಿ. – ಸದಸ್ಯರು
7. ಡಾ. ವಿನಯ್ ಪಿ., ಡೀನ್, ವೈದಿಕ ಅಧ್ಯಯನ ನಿಕಾಯ, ಕ.ಸಂ.ವಿ. – ಸದಸ್ಯರು
8. ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 – ಸದಸ್ಯರು
9. ಡಾ. ಶ್ರೀಕಾಂತ ಪುರೋಹಿತ್, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ –571811 – ಸದಸ್ಯರು
10. ಡಾ. ನಾಗಪತಿ ಕೇಶವ ಭಟ್ಟ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ –581334 – ಸದಸ್ಯರು
11. ವಿದ್ವಾನ್ ಆರ್.ಪಿ. ಜೋಶಿ, ಪ್ರಾಚಾರ್ಯರು, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ ಬಾಗಲಕೋಟೆ ಜಿಲ್ಲೆ –587301 – ಸದಸ್ಯರು
12. ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ., ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ–ಸದಸ್ಯ ಕಾರ್ಯದರ್ಶಿಗಳು

**ಸಭೆಯಲ್ಲಿ ಹಾಜರಿಲ್ಲದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
3. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು.

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ಕ್ರ. ಸಂಖ್ಯೆ | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | ವಿಶ್ವವಿದ್ಯಾಲಯದಲ್ಲಿ "ಮಹಿಳಾ ಆರೋಗ್ಯಕ್ಕಾಗಿ ಯೌಗಿಕ ಮಾರ್ಗೋಪಾಯಗಳು" ವಿಷಯದ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸುವ ಕುರಿತು. |
| ಟಿಪ್ಪಣಿ | ವಿಶ್ವ ಮಹಿಳಾದಿನಾಚರಣೆಯ ಅಂಗವಾಗಿ ರಂದು "ಮಹಿಳಾ ಆರೋಗ್ಯಕ್ಕಾಗಿ ಯೌಗಿಕ ಮಾರ್ಗೋಪಾಯಗಳು" ವಿಷಯದ ಕುರಿತು ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಮಮತಾ ಭಾಗವತ್ ರವರು ಒಪ್ಪಿಗೆಯನ್ನು ನೀಡಿರುತ್ತಾರೆ. ಈ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದಲ್ಲಿ ಆಯೋಜಿಸಲು ಪ್ರತಿಷ್ಠಾ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯದಲ್ಲಿ "ಮಹಿಳಾ ಆರೋಗ್ಯಕ್ಕಾಗಿ ಯೌಗಿಕ ಮಾರ್ಗೋಪಾಯಗಳು" ವಿಷಯದ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲು ಸಭೆಯು ಅನುಮೋದಿಸಿತು. |
| ವಿಷಯ 02 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONFERMENT OF HONORARY DEGREE OR OTHER ACADEMIC DISTINCTIONS (Honorius Causa)" IN KARNATAKA SAMSKRITA VISHWAVIDYALAYA" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONFERMENT OF HONORARY DEGREE OR OTHER ACADEMIC DISTINCTIONS (Honorius Causa)" IN KARNATAKA SAMSKRITA VISHWAVIDYALAYA" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರತಿಷ್ಠಾ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONFERMENT OF HONORARY DEGREE OR OTHER ACADEMIC DISTINCTIONS (Honorius Causa)" IN KARNATAKA SAMSKRITA VISHWAVIDYALAYA" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 03 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONVOCATION FOR CONFERRING DEGREES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONVOCATION FOR CONFERRING DEGREES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರತಿಷ್ಠಾ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONVOCATION FOR CONFERRING DEGREES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 04 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING RULES OF BUSINESS OF THE SYNDICATE, THE ACADEMIC COUNCIL, THE FINANCE COMMITTEE AND THE FACULTIES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ STATUTE GOVERNING RULES OF BUSINESS OF THE |

<table>
<tr><td></td><td>SYNDICATE, THE ACADEMIC COUNCIL, THE FINANCE COMMITTEE AND THE FACULTIES ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಶಿಕ್ಷಣ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ.</td></tr>
<tr><td>ನಿರ್ಣಯ</td><td>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING RULES OF BUSINESS OF THE SYNDICATE, THE ACADEMIC COUNCIL, THE FINANCE COMMITTEE AND THE FACULTIES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.</td></tr>
<tr><td>ವಿಷಯ<br>05</td><td>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "REGULATIONS GOVERNING THE DEGREE OF DOCTOR OF PHILOSOPHY (PH.D) – VIDYAVARIDHI" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.</td></tr>
<tr><td>ಟಿಪ್ಪಣಿ</td><td>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "REGULATIONS GOVERNING THE DEGREE OF DOCTOR OF PHILOSOPHY (PH.D) – VIDYAVARIDHI" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಶಿಕ್ಷಣ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ.</td></tr>
<tr><td>ನಿರ್ಣಯ</td><td>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "REGULATIONS GOVERNING THE DEGREE OF DOCTOR OF PHILOSOPHY (PH.D) – VIDYAVARIDHI" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.</td></tr>
<tr><td>ವಿಷಯ<br>06</td><td>ವಿಶ್ವವಿದ್ಯಾಲಯದ ಪರಿಸರ ಮತ್ತು ಸಂಯೋಜಿತ ಕಾಲೇಜುಗಳಲ್ಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿಯ ಗರಿಷ್ಠ ಪ್ರಮಾಣವನ್ನು (Maximum Intake Capacity) ಕಡಿಮೆ ಮಾಡುವ ಬಗ್ಗೆ.</td></tr>
<tr><td>ಟಿಪ್ಪಣಿ</td><td>ಸ್ನಾತಕ ಪದವಿಗೆ 60 ಸೀಟುಗಳು ಮತ್ತು ಸ್ನಾತಕೋತ್ತರ ಪದವಿಗೆ 40 ಸೀಟುಗಳ ಗರಿಷ್ಠ ಪ್ರಮಾಣವನ್ನು ನಿಗದಿಪಡಿಸಿಕೊಂಡಿದ್ದು, ಆದರೆ ಪ್ರವೇಶಾತಿ ತುಂಬಾ ಕಡಿಮೆ ಇದ್ದು, ನಿಗದಿಪಡಿಸಲಾದ ಗರಿಷ್ಠ ಪ್ರಮಾಣವನ್ನು ಮುಟ್ಟಲು ಸಾಧ್ಯವಾಗುತ್ತಿಲ್ಲ. ಹಿಂದಿನ 3 ವರ್ಷಗಳ ಅಂಕಿ ಅಂಶಗಳ ಪ್ರಕಾರ ಹಲವು ಕಾಲೇಜುಗಳಲ್ಲಿ ಮಂಜೂರಾದ ಸೀಟುಗಳಲ್ಲಿ ಶೇಕಡಾ 15 ರಷ್ಟು ಕೂಡ ಭರ್ತಿಯಾಗಿಲ್ಲ ಎಂಬುದು ಗಮನಕ್ಕೆ ಬಂದಿದೆ.
<table>
<tr><th>ಶೈಕ್ಷಣಿಕ ವರ್ಷ</th><th>2023–24</th><th>2022–23</th><th>2021–22</th></tr>
<tr><td>ಮಂಜೂರಾದ ಸೀಟುಗಳು</td><td>6960</td><td>6960</td><td>6970</td></tr>
<tr><td>ಭರ್ತಿಯಾದ ಸೀಟುಗಳು</td><td>875</td><td>768</td><td>748</td></tr>
<tr><td>ಒಟ್ಟಾರೆ ದಾಖಲಾತಿಯ ಶೇಕಡಾವಾರು</td><td>12.57%</td><td>11.03%</td><td>10.73%</td></tr>
</table>
ಯಾವುದೇ ಸಂಯೋಜಿತ ಕಾಲೇಜು ಅಥವಾ ವಿಶ್ವವಿದ್ಯಾಲಯದ ಪರಿಸರದ ಕಾಲೇಜು ಸರ್ಕಾರದ/ಯುಜಿಸಿ ನಿಯಮಾವಳಿಗಳನ್ವಯ ಯಾವುದೇ ಶಾಸನಾತ್ಮಕ ಸಂಸ್ಥೆಗಳಲ್ಲಿ ನಿಗದಿಪಡಿಸಲಾಗಿರುವ ಮಾನದಂಡಗಳನ್ವಯ ಮೌಲ್ಯಮಾಪನ ಅಥವಾ ಮಾನ್ಯತೆ ಪಡೆಯಲು ಬಯಸಿದರೆ, ಈ ದಾಖಲಾತಿ ಪ್ರಮಾಣವು ಅತ್ಯಂತ ಕಳಪೆ ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ, ಸ್ನಾತಕ ಪದವಿಗೆ 20 ಸೀಟುಗಳು ಮತ್ತು ಸ್ನಾತಕೋತ್ತರ ಪದವಿಗೆ 10 ಸೀಟುಗಳಿಗೆ ಇಳಿಸುವುದಕ್ಕೆ ಸಭೆಯ ಅನುಮೋದನೆಗೆ ಮಂಡಿಸಿದೆ.</td></tr>
<tr><td>ನಿರ್ಣಯ</td><td>ವಿಶ್ವವಿದ್ಯಾಲಯದ ಪರಿಸರ ಮತ್ತು ಸಂಯೋಜಿತ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸ್‌ಗಳಿಗೆ ಗರಿಷ್ಠ – 20 ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಗರಿಷ್ಠ – 10 ಪ್ರವೇಶಾತಿಯ ಗರಿಷ್ಠ ಪ್ರಮಾಣವನ್ನು (Maximum Intake Capacity) ಮರುನಿಗದಿಪಡಿಸಿ ಅನುಮೋದಿಸಿತು. ಗರಿಷ್ಠ ಮಿತಿಗಿಂತ ಹೆಚ್ಚಿನ ದಾಖಲಾತಿಯ ಬೇಡಿಕೆ ಬಂದಲ್ಲಿ ಕಾಲೇಜು/ಪರಿಸರದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಂಡು ಘಟನೋತ್ತರ ಅನುಮೋದನೆ ಪಡೆಯುವಂತೆ ಸಭೆಯಲ್ಲಿ</td></tr>
</table>

| | |
|---|---|
| | ತೀರ್ಮಾನಿಸಲಾಯಿತು. ಮುಂದುವರೆದು BSc – Yogic Science and Councelling ಮತ್ತು MSc – Yoga Therapy and Councelling ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿರುವುದನ್ನು ಗಮನಿಸಿ ಈ ಕೋರ್ಸ್‌ಗಳಿಗೆ ಪ್ರವೇಶಾತಿಯ ಗರಿಷ್ಠ ಪ್ರಮಾಣವನ್ನು (Maximum Intake Capacity) BSc – Yogic Science and Councelling ಕೋರ್ಸಿಗೆ 60 ಮತ್ತು MSc – Yoga Therapy and Councelling ಕೋರ್ಸ್‌ಗೆ 40 ಎಂದು ಮರುನಿಗದಿಪಡಿಸಿ ಅನುಮೋದಿಸಿತು. |
| ವಿಷಯ 07 | ಬ್ರಿಡ್ಜ್‌ವಾಟರ್ ಸ್ಟೇಟ್ ವಿಶ್ವವಿದ್ಯಾಲಯದೊಂದಿಗೆ ಸಹಿ ಮಾಡಿದ ಒಪ್ಪಂದಕ್ಕೆ (MOU) ಅನುಮೋದನೆ ಪಡೆಯುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವು ಬ್ರಿಡ್ಜ್ ವಾಟರ್ ಸ್ಟೇಟ್ ಯೂನಿವರ್ಸಿಟಿ, ಬ್ರಿಡ್ಜ್ ವಾಟರ್, ಮ್ಯಾಸಚೂಸೆಟ್ಸ್, USA ನೊಂದಿಗೆ 2 ವರ್ಷಗಳ ಅವಧಿಗೆ 2025 ಫೆಬ್ರವರಿ 12 ರಂದು ಶೆರಾಟನ್ ಗ್ರಾಂಡ್‌ನಲ್ಲಿ ವಾಸ್ತವ ತೊಡಗಿಸಿಕೊಳ್ಳುವಿಕೆ ಮತ್ತು ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು ಅಥವಾ ಹಂಚಿಕೆಯ ಆಸಕ್ತಿಯ ವಿವಿಧ ಶೈಕ್ಷಣಿಕ ಕ್ಷೇತ್ರಗಳಲ್ಲಿ ಕಾರ್ಯಾಗಾರಗಳನ್ನು ಕೈಗೊಳ್ಳುವ ಬಗೆಗಿನ ಒಪ್ಪಂದಕ್ಕೆ ಸಹಿ ಹಾಕಿದೆ:<br>ಎ. ಜಂಟಿ ಸಂಶೋಧನೆ.<br>ಬಿ. ಜಂಟಿ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಯೋಜನೆಗಳು.<br>ಸಿ. ಅಧ್ಯಾಪಕರ ವಿನಿಮಯ.<br>ಡಿ. ಪದವಿ ಮತ್ತು ಸ್ನಾತಕ ಪದವಿ ವಿದ್ಯಾರ್ಥಿಗಳ ವಿನಿಮಯ.<br>ಇ. ಜಂಟಿ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುವುದು.<br>ಸದರಿ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಬ್ರಿಡ್ಜ್‌ವಾಟರ್ ಸ್ಟೇಟ್ ವಿಶ್ವವಿದ್ಯಾಲಯದೊಂದಿಗೆ ಸಹಿ ಮಾಡಿದ ಒಪ್ಪಂದಕ್ಕೆ (MOU) ಸಭೆಯು ಅನುಮೋದಿಸಿತು. |
| ವಿಷಯ 08 | ಅಮೇರಿಕಾದ ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ (MOU) ಸಹಿ ಹಾಕಲು ಅನುಮೋದನೆ ಪಡೆಯುವ ಬಗ್ಗೆ. |
| ಟಿಪ್ಪಣಿ | ಅಮೇರಿಕಾದ ಫ್ಲೋರಿಡಾದ ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲು ವಿನಂತಿಸಿದೆ. ಈ ಒಪ್ಪಂದದಲ್ಲಿನ ಮುಖ್ಯ ಅಂಶಗಳು ಈ ಕೆಳಕಂಡಂತಿವೆ.<br>1. ಜಂಟಿಯಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕಾರ್ಯಕ್ರಮಗಳನ್ನು ನೀಡುತ್ತದೆ. ಮತ್ತು ಇತರ ಯೋಜನೆಗಳಲ್ಲಿ ಸಹಕರಿಸುತ್ತದೆ<br>2. ಸಹಯೋಗದ ಭಾಗವಾಗಿ KSU ಮತ್ತು ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯವು ಆಯೋಜಿಸುವ ಎಲ್ಲಾ ಕಾರ್ಯಕ್ರಮಗಳು, ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.<br>3. ಪರಿಣಾಮಕಾರಿ ಮೌಲ್ಯಮಾಪನಗಳು, ಪ್ರಕರಣ ಅಧ್ಯಯನಗಳು ಇತ್ಯಾದಿಗಳನ್ನು ಒಳಗೊಂಡಂತೆ ಪರಿಕಲ್ಪನಾತ್ಮಕ, ನೀತಿ ಮತ್ತು ಕ್ರಿಯಾ–ಆಧಾರಿತ ಸಂಶೋಧನೆ ನಡೆಸುವುದು.<br>4. ಸಾಹಿತ್ಯವನ್ನು ಪ್ರಕಟಿಸಿ ಮತ್ತು ಮೂಲ ಪಠ್ಯಗಳು, ವ್ಯಾಖ್ಯಾನಗಳು ಮತ್ತು ಅನುವಾದಗಳನ್ನು ಒಳಗೊಂಡಂತೆ ಮುದ್ರಣ ಮತ್ತು ಮುದ್ರಣೇತರ ವಸ್ತುಗಳನ್ನು ಅಭಿವೃದ್ಧಿಪಡಿಸುವುದು.<br>5. ಭಾರತೀಯ ಸಂಸ್ಕೃತಿ ಮತ್ತು ಮೌಲ್ಯಗಳ ಮೇಲೆ ವಿಶೇಷ ಒತ್ತು ನೀಡುವ ವಿವಿಧ ಕೋರ್ಸ್‌ಗಳಿಗೆ ಸಂಪನ್ಮೂಲ ಸಾಮಗ್ರಿಗಳ ತಯಾರಿಕೆ. |

| | |
|---|---|
| | 6. ವಿಚಾರ ಸಂಕಿರಣಗಳು, ಸಮ್ಮೇಳನಗಳು ಮತ್ತು ಕಾರ್ಯಾಗಾರಗಳನ್ನು ಆಯೋಜಿಸಿ, ಇತರ ಶಿಕ್ಷಣ ಸಂಸ್ಥೆಗಳು ಮತ್ತು ಸಂಸ್ಥೆಗಳ ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣಪತ್ರಗಳನ್ನು ಗುರುತಿಸಿ<br>7. ಸಂಸ್ಥೆಗಳಂತೆಯೇ ಸಂಪೂರ್ಣವಾಗಿ ಅಥವಾ ಭಾಗಶಃ ಹೋಲುವ ಉದ್ದೇಶಗಳನ್ನು ಹೊಂದಿರುವ ಯಾವುದೇ ಇತರ ಸಂಘ, ಸಮಾಜ ಅಥವಾ ಸಂಸ್ಥೆಯೊಂದಿಗೆ ಸಹಕರಿಸುವುದು.<br>8. ಎರಡೂ ಸಂಸ್ಥೆಗಳ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಸಾಧಿಸಲು ಪ್ರಾಸಂಗಿಕ, ಅಗತ್ಯ ಅಥವಾ ಅನುಕೂಲಕರವಾದ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳುವುದು.<br>9. ವೈಯಕ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮತ್ತು ಬದಲಾವಣೆಗೆ ಕಾರಣವಾಗುವ/ಕೊಡುವ ಯಾವುದೇ ಚಟುವಟಿಕೆಯನ್ನು ಕೈಗೊಳ್ಳುವುದು.<br>ಒಪ್ಪಂದದ ಅವಧಿ 2 ವರ್ಷಗಳು, ಹಣಕಾಸಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಎಲ್ಲಾ ವೆಚ್ಚಗಳನ್ನು ಆಯಾ ಸಂಸ್ಥೆಗಳೆ ಭರಿಸುತ್ತಾರೆ ಮತ್ತು ಈ ವೆಚ್ಚಗಳನ್ನು ಪರಸ್ಪರ ಹಂಚಿಕೊಳ್ಳಲಾಗುವುದಿಲ್ಲ. ಪ್ರಸ್ತುತ ಒಪ್ಪಂದದ ಅಡಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳ ನಡುವೆ ಉದ್ಭವಿಸಬಹುದಾದ ಯಾವುದೇ ವಿವಾದವನ್ನು ಎರಡೂ ಸಂಸ್ಥೆಗಳ ನಡುವೆ ಪರಸ್ಪರ ಇತ್ಯರ್ಥಪಡಿಸಲಾಗುತ್ತದೆ. ಮಧ್ಯಸ್ಥಿಕೆ ವಿಚಾರಣೆಗಳು ಮತ್ತು ಇದರ ಅನುಸಾರವಾಗಿ ನಡೆಯುವ ಎಲ್ಲಾ ಸಭೆಗಳು ಭಾರತ ದೇಶದ, ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ನಡೆಯುತ್ತವೆ ಮತ್ತು ಇಂಗ್ಲಿಷ್‌ನಲ್ಲಿ ನಡೆಸಲ್ಪಡುತ್ತವೆ. ಈ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಅಮೇರಿಕಾದ ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ (MOU) ಮಾಡಿಕೊಳ್ಳಲು ಸಭೆಯು ಅನುಮೋದಿಸಿತು. |
| ವಿಷಯ 09 | **Unnathi Healing Foundation** ಸಂಶೋಧನಾ ಕೇಂದ್ರದವರು ನಡೆಸಲು ಉದ್ದೇಶಿಸಿರುವ ಸರ್ಟಿಫಿಕೇಟ್ ಡಿಪ್ಲೋಮಾ ಕೋರ್ಸ್‌ಗಳ ಹೆಸರುಗಳನ್ನು ತೀರ್ಮಾನಿಸುವ ಕುರಿತು. |
| ಟಿಪ್ಪಣಿ | Unnathi Healing Foundation ಸಂಶೋಧನಾ ಕೇಂದ್ರದವರು<br>1. Yogic Healing-Professional Healer's Certification Program.<br>2. Yogic Healing- Diploma in Yogic Healing Coaching.<br>3. Yogic Psychotheraphy ಎನ್ನುವ ಸರ್ಟಿಫಿಕೇಟ್ ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ಅಧ್ಯಯನ ಮಂಡಳಿಯು ಈ ಹೆಸರುಗಳನ್ನು ಬದಲಿಸಲು ಸೂಚಿಸಿತ್ತು. ಸದರಿ ಸಂಸ್ಥೆಯು ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಮರುಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>1. The Course name "Yogic Healing-Professional Healer's Certification Program" has been modified to "Professional Certification Program on Holistic wellbeing (Panchakosha Vidya).<br>2. The Course Name has been modified to "Yogic Healing- Diploma in Yogic Healing Coaching.'' Has been modified to "Diploma in Holistic Wellbeing (Panchakosha Vidya) Coaching"<br>3. The Couse Contents under "Yogic Psychotheraphy" have been upload to "Holistic Wellbeing Techniques for Emotional Wellness."<br>ಅಧ್ಯಯನ ಮಂಡಳಿಯು Professional Certification Program on Holistic wellbeing (Panchakosha Vidya) ಈ ಹೆಸರಿನಲ್ಲಿ Professional ಎನ್ನುವ ಪದವನ್ನು ತೆಗೆಯಲು ಸೂಚಿಸಿರುತ್ತಾರೆ. ಮತ್ತು Diploma in Holistic Wellbeing (Panchakosha Vidya) Coaching ಈ ಹೆಸರಿನಲ್ಲಿ Coaching ಎನ್ನುವ ಪದವನ್ನು ತೆಗೆಯಲು ಸೂಚಿಸಿರುತ್ತಾರೆ. ಈ ಮೇಲ್ಕಂಡ ಮಾರ್ಪಾಡುಗಳೊಂದಿಗೆ ಮರುಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಆದರೆ Unnathi Healing Foundation ಸಂಸ್ಥೆಯವರು |

| | |
|---|---|
| | 1. Professional Certification Program on Holistic wellbeing (Panchakosha Vidya).<br>2. Diploma in Holistic Wellbeing (Panchakosha Vidya) Coaching.<br>3. "Holistic Wellbeing Techniques for Emotional Wellness."<br>ಈ ಹೆಸರುಗಳನ್ನೇ ಮುಂದುವರೆಸಲು ಅವಕಾಶ ನೀಡುವಂತೆ ಕೋರಿರುತ್ತಾರೆ. ಈ ಕುರಿತು ಪ್ರಶಿಕ್ಷಣ ಪರಿಷತ್ತಿನ ಸಲಹೆಗಾಗಿ ಸಲ್ಲಿಸಿದೆ. |
| ನಿರ್ಣಯ | **Unnathi Healing Foundation** ಸಂಶೋಧನಾ ಕೇಂದ್ರದವರು ನಡೆಸಲು ಉದ್ದೇಶಿಸಿರುವ ಸರ್ಟಿಫಿಕೇಟ್ ಡಿಪ್ಲೋಮಾ ಕೋರ್ಸುಗಳ ಹೆಸರು ಬದಲಾವಣೆಗೆ ಸಭೆಯು ಅನುಮೋದಿಸಿತು. |
| ವಿಷಯ 10 | **ಅಲ್ಪಾವಧಿ ಕೋರ್ಸುಗಳಿಗೆ ಸಿದ್ಧಪಡಿಸಿರುವ ಪಾಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.** |
| ಟಿಪ್ಪಣಿ | ಜ್ಯೋತಿಷ ಅಲ್ಪಾವಧಿ ಕೋರ್ಸುಗಳಾದ ನವಗ್ರಹಗಳ ಪರಿಚಯ, ಪಂಚಾಂಗದ ಸಂಕ್ಷಿಪ್ತ ಪರಿಚಯ, ಮತ್ತು ವಾಸ್ತು ವಿಜ್ಞಾನದ ಸಂಕ್ಷಿಪ್ತ ವಿವರಗಳು ಈ ಮೂರೂ ಕೋರ್ಸುಗಳಿಗೆ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದ್ದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **ಜ್ಯೋತಿಷ ಅಲ್ಪಾವಧಿ ಕೋರ್ಸುಗಳ ಪಾಠ್ಯಕ್ರಮವನ್ನು ಸಭೆಯು ಅನುಮೋದಿಸಿತು.** |
| ವಿಷಯ 11 | **ಶ್ರೀನಿಕೇತನ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ, ಕೆಳದಿ ರಾಣಿ ಚೆನ್ನಮ್ಮಾಜಿ ಅಧ್ಯಯನ ಪೀಠ – ಕುಕ್ಕೆ ಸುಬ್ರಹ್ಮಣ್ಯ ಮಠ, ಕುಕ್ಕೆ ಸುಬ್ರಹ್ಮಣ್ಯ – 574238 ಈ ಸಂಸ್ಥೆಗೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡುವ ಬಗೆಗೆ.** |
| ಟಿಪ್ಪಣಿ | ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀನಿಕೇತನ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ, ಕೆಳದಿ ರಾಣಿ ಚೆನ್ನಮ್ಮಾಜಿ ಅಧ್ಯಯನ ಪೀಠ – ಕುಕ್ಕೆ ಸುಬ್ರಹ್ಮಣ್ಯ ಮಠ, ಕುಕ್ಕೆ ಸುಬ್ರಹ್ಮಣ್ಯ – 574238 ಈ ಸಂಸ್ಥೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡುವಂತೆ ಕೋರಿತ್ತು. ಮಾನ್ಯಕುಲಪತಿಗಳಿಂದ ರಚಿಸಲ್ಪಟ್ಟ ಪಂಚ ಸದಸ್ಯ ಪರಿವೀಕ್ಷಣಾ ಸಮಿತಿಯು ದಿನಾಂಕ:29.01.2025ರಂದು ಸದರಿ ಸಂಸ್ಥೆಗೆ ಭೇಟಿ ನೀಡಿ ತಪಾಸಣೆಯನ್ನು ನಡೆಸಿ ಮೇಲ್ಕಂಡ ಸಂಸ್ಥೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಬಹುದೆಂದು ವರದಿಯನ್ನು ಸಲ್ಲಿಸಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **ಶ್ರೀನಿಕೇತನ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ, ಕೆಳದಿ ರಾಣಿ ಚೆನ್ನಮ್ಮಾಜಿ ಅಧ್ಯಯನ ಪೀಠ – ಕುಕ್ಕೆ ಸುಬ್ರಹ್ಮಣ್ಯ ಮಠ, ಕುಕ್ಕೆ ಸುಬ್ರಹ್ಮಣ್ಯ – 574238 ಈ ಸಂಸ್ಥೆಗೆ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆಯನ್ನು ನೀಡಲು ಸಭೆಯು ಅನುಮೋದಿಸಿತು.** |
| ವಿಷಯ 12 | **ಯೋಗ ಅಧ್ಯಯನ ಮತ್ತು ಸಂಶೋಧನ ಕೇಂದ್ರಗಳ ಮಾನ್ಯತೆಯನ್ನು ನವೀಕರಿಸುವ ಬಗೆಗೆ.** |
| ಟಿಪ್ಪಣಿ | ಈ ಕೆಳಕಂಡ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಗಳಿಗೆ 2020–21ನೇ ಸಾಲಿನಿಂದ 2022–23ನೇ ಸಾಲಿನ ವರೆಗೆ ಮೂರು ವರ್ಷಗಳ ಅವಧಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಲಾಗಿತ್ತು. ಈ ಸಂಸ್ಥೆಗಳ ಮಾನ್ಯತೆಯ ಅವಧಿಯು ಮುಕ್ತಾಯಗೊಂಡ ಹಿನ್ನಲೆಯಲ್ಲಿ, ಮಾನ್ಯತೆಯನ್ನು ನವೀಕರಿಸುವಂತೆ ಕೋರಿ ಸಂಸ್ಥೆಗಳು ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದವು. ಸಂಸ್ಥೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಾನ್ಯತೆ ನವೀಕರಣಕ್ಕಾಗಿ ವಿಶ್ವವಿದ್ಯಾಲಯವು ರಚಿಸಿದ್ದ ತ್ರಿಸದಸ್ಯ ಸಮಿತಿಗಳು ಆಯಾ ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಮಾನ್ಯತೆಯನ್ನು ನವೀಕರಿಸಬಹುದೆಂದು ವರದಿಯನ್ನು ನೀಡಿರುತ್ತವೆ. ಈ ಹಿನ್ನಲೆಯಲ್ಲಿ, ಕೆಳಕಂಡ ಸಂಸ್ಥೆಗಳಿಗೆ 2023–24ನೇ ಸಾಲಿನಿಂದ ಪೂರ್ವಾನ್ವಯವಾಗುವಂತೆ 2025–26ನೇ ಸಾಲಿನ ವರೆಗೆ ಮಾನ್ಯತೆಯನ್ನು ನವೀಕರಣ ಮಾಡಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |

1. ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಹನುಮಂತಪುರ, ತುಮಕೂರು
2. ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕೃಷ್ಣಮೂರ್ತಿಪುರಂ, ಮೈಸೂರು
3. ಶ್ರೀ ಪ್ರಕಾಶ ಯೋಗಿ ಇಂಟರ್ ನ್ಯಾಷನಲ್ ಯೋಗ ಕೇಂದ್ರ, ಹಂಪಿನಗರ, ಬೆಂಗಳೂರು

**ನಿರ್ಣಯ**

ಯೋಗ ಅಧ್ಯಯನ ಮತ್ತು ಸಂಶೋಧನ ಕೇಂದ್ರಗಳ ಮಾನ್ಯತೆಯನ್ನು ನವೀಕರಿಸಲು ಸಭೆಯು ಅನುಮೋದಿಸಿತು.

**ವಿಷಯ 13**

ಉತ್ಕರ್ಷ ಸಂಸ್ಥೆ(ರಿ.), ಉತ್ಕರ್ಷ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜಂಬುಕೇಶ್ವರ ಗಲ್ಲಿ, ಜಮಖಂಡಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ– ಈ ಸಂಸ್ಥೆಗೆ ಮಾನ್ಯತೆ ನೀಡುವ ಬಗ್ಗೆ.

**ಟಿಪ್ಪಣಿ**

ಉತ್ಕರ್ಷ ಸಂಸ್ಥೆ(ರಿ.), ಉತ್ಕರ್ಷ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜಂಬುಕೇಶ್ವರ ಗಲ್ಲಿ, ಜಮಖಂಡಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ– ಈ ಸಂಸ್ಥೆಗೆ ಮಾನ್ಯತೆ ನೀಡುವ ಸಂಬಂಧ ದಿನಾಂಕ: 24.03.2025ರಂದು ತ್ರಿಸದಸ್ಯ ಸಮಿತಿಯು ಭೇಟಿ ನೀಡಿ ತಪಾಸಣೆ ನಡೆಸಿ ಮಾನ್ಯತೆಯನ್ನು ನೀಡಬಹುದೆಂದು ವರದಿ ನೀಡಿರುತ್ತದೆ. ಈ ಹಿನ್ನಲೆಯಲ್ಲಿ 2024–25ನೇ ಸಾಲಿನಿಂದ 2026–27ನೇ ಸಾಲಿನ ವರೆಗೆ ಮೂರು ವರ್ಷಗಳ ಅವಧಿಗೆ ಮಾನ್ಯತೆಯನ್ನು ನೀಡಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ನಿರ್ಣಯ**

ಉತ್ಕರ್ಷ ಸಂಸ್ಥೆ(ರಿ.), ಉತ್ಕರ್ಷ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜಂಬುಕೇಶ್ವರ ಗಲ್ಲಿ, ಜಮಖಂಡಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ– ಈ ಸಂಸ್ಥೆಗೆ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು.

**ವಿಷಯ 14**

ಎಂ.ಎಸ್ಸಿ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ, ಬಿ.ಎಸ್ಸಿ ಯೋಗಿಕ್ ಸೈನ್ಸ್ ಮತ್ತು ಸಮಾಲೋಚನೆ ಮತ್ತು ಯೋಗ ಸರ್ಟಿಫಿಕೇಟ್, ಯೋಗ ಡಿಪ್ಲೋಮ ಹಾಗೂ ಯೋಗ ಪಿ.ಜಿ. ಡಿಪ್ಲೋಮ ಪಾಠ್ಯಕ್ರಮವನ್ನು ಸಿದ್ಧಪಡಿಸಿದ್ದು, ಅನುಮೋದಿಸುವ ಬಗ್ಗೆ.

**ಟಿಪ್ಪಣಿ**

2024–25ನೇ ಸಾಲಿನ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ವಿಭಾಗದ ಬಿ.ಎಸ್ಸಿ ಯೋಗಿಕ್ ಸೈನ್ಸ್ ಮತ್ತು ಸಮಾಲೋಚನೆ, ಎಂ.ಎಸ್ಸಿ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ಮತ್ತು ಯೋಗ ಸರ್ಟಿಫಿಕೇಟ್, ಯೋಗ ಡಿಪ್ಲೋಮ ಹಾಗೂ ಯೋಗ ಪಿ.ಜಿ. ಡಿಪ್ಲೋಮ ಪಾಠ್ಯಕ್ರಮವನ್ನು ಎಸ್ ಇ.ಪಿ ಯೋಜನೆಯಂತೆ ಹಾಗೂ ಎನ್.ಇ.ಪಿ ಯೋಜನೆಯಂತೆ ಸಿದ್ಧಪಡಿಸಿ ಆಂತರಿಕ ಅಂಕಗಳು ಮತ್ತು ಲಿಖಿತ ಅಂಕಗಳನ್ನು ಒಳಗೊಂಡಂತೆ ಬಿ.ಓ.ಎಸ್ ಸಮಿತಿಯಲ್ಲಿ ಪ್ರಸ್ತಾಪಿಸಲಾಗಿತ್ತು. ಅದರನ್ವಯ ಈ ಕೆಳಕಂಡಂತೆ ಸಭೆಯ ಅನುಮೋದನೆಗೆ ಮಂಡಿಸಿದೆ.

| ಕ್ರ.ಸಂ | ವಿಷಯಗಳು | ಅಂಕಗಳು | | |
|---|---|---|---|---|
| | | ಆಂತರಿಕ ಅಂಕಗಳು | ಲಿಖಿತ ಅಂಕಗಳು | ಒಟ್ಟು ಅಂಕಗಳು |
| 1 | ಎಂ.ಎಸ್ಸಿ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ | 30 | 70 | 100 |
| 2 | ಬಿ.ಎಸ್ಸಿ ಯೋಗಿಕ್ ಸೈನ್ಸ್ ಮತ್ತು ಸಮಾಲೋಚನೆ | 20 | 80 | 100 |
| 3 | ಯೋಗ ಸರ್ಟಿಫಿಕೇಟ್ | 20 | 80 | 100 |
| 4 | ಯೋಗ ಡಿಪ್ಲೋಮ | 20 | 80 | 100 |
| 5 | ಯೋಗ ಪಿ.ಜಿ. ಡಿಪ್ಲೋಮ | 20 | 80 | 100 |

**ನಿರ್ಣಯ**

ಎಂ.ಎಸ್ಸಿ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ, ಬಿ.ಎಸ್ಸಿ ಯೋಗಿಕ್ ಸೈನ್ಸ್ ಮತ್ತು ಸಮಾಲೋಚನೆ ಮತ್ತು ಯೋಗ ಸರ್ಟಿಫಿಕೇಟ್, ಯೋಗ ಡಿಪ್ಲೋಮ ಹಾಗೂ ಯೋಗ ಪಿ.ಜಿ. ಡಿಪ್ಲೋಮ ಪಾಠ್ಯಕ್ರಮವನ್ನು ಹಾಗೂ ಆಂತರಿಕ ಮತ್ತು ಲಿಖಿತ

| | |
|---|---|
| | ಅಂಕಗಳನ್ನು ನಿಗದಿಗೊಳಿಸಿರುವುದನ್ನು ಸಭೆಯು ಅನುಮೋದಿಸಿತು. |
| ವಿಷಯ 15 | **'Diploma Course in Dr. B.R. Ambedkar Studies' ಕೋರ್ಸ್ ಪ್ರವೇಶ ಶುಲ್ಕದ ಬಗೆಗೆ** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರವು 'Diploma Course in Dr. B.R. Ambedkar Studies' ಕೋರ್ಸ್ ನಡೆಸುತ್ತಿರುವುದು ಸರಿಯಷ್ಟೆ. ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕಸಂವಿ/01/ಅಧ್ಯಯನಾಂಗ/ಸ.ಡಿ.ಪಿ.ಜಿ/2023-24; ದಿನಾಂಕ: 21.10.2023ರಲ್ಲಿ ಈ ಕೋರ್ಸ್‌ನ ಅಧ್ಯಯನಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು ರೂ. 2500/-ಗಳಿಗೆ ನಿಗದಿಪಡಿಸಿ ಆದೇಶಿಸಲಾಗಿತ್ತು. ಮುಂದುವರೆದು, ಪ್ರವೇಶಾತಿ ಅಧಿಸೂಚನೆ ಸಂಖ್ಯೆ: ಕಸಂವಿ/ಸಡಿಪಿಜಿಡಿ/01/ಆಡಳಿತ-2024-25; ದಿನಾಂಕ: 27.11.2024ರಲ್ಲಿ ಈ ಕೋರ್ಸ್‌ನ ಪ್ರವೇಶಶುಲ್ಕವನ್ನು ರೂ. 3500/-ಗಳಿಗೆ ನಿಗದಿಪಡಿಸಲಾಗಿದೆ. ಪ್ರವೇಶಶುಲ್ಕವನ್ನು ಹೆಚ್ಚಿಸಿರುವುದರಿಂದ ಅಂಬೇಡ್ಕರ್ ಸ್ಟಡೀಸ್ ಕೋರ್ಸ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ತುಂಬಾ ಕಡಿಮೆಯಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಕೇವಲ 03 ಮಾತ್ರ ಆಗಿದೆ. ಈ ಕೋರ್ಸ್ ಸೇರಬಯಸುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಆರ್ಥಿಕವಾಗಿ ಬಹಳಷ್ಟು ಹಿಂದುಳಿದವರಾಗಿರುತ್ತಾರೆ. ಈ ಕೋರ್ಸ್ ಜ್ಞಾನಾಧಾರಿತವಾದುದಾಗಿದ್ದು, ಉದ್ಯೋಗಾಧಾರಿತವಾಗಿಲ್ಲದಿರುವುದರಿಂದ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳೂ ಕೂಡ ರೂ. 3500/-ಗಳನ್ನು ಪಾವತಿಸಿ ಕೋರ್ಸ್ ಗೆ ಪ್ರವೇಶ ಪಡೆಯಲು ಮುಂದಾಗುತ್ತಿಲ್ಲ.<br>ಈ ವಿಷಯವನ್ನು ದಿನಾಂಕ: 01.04.2025ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿ ಈ ರೀತಿಯಾಗಿ ಚರ್ಚಿಸಲಾಯಿತು.<br>"01. ರೂ 3500/- ರಿಂದ ರೂ 2500/-ಕ್ಕೆ ಇಳಿಸಿ ಶುಲ್ಕವನ್ನು ನಿಗದಿಪಡಿಸಲಾಯಿತು.<br>02. ಎಸ್ ಸಿ/ಎಸ್ ಟಿ ವಿದ್ಯಾರ್ಥಿಗಳು ಶುಲ್ಕ ರಹಿತವಾಗಿ ನೋಂದಣಿಯಾದ ತಕ್ಷಣ ಎಸ್.ಸಿ.ಪಿ/ಟಿ.ಎಸ್.ಪಿ ಕ್ರಿಯಾ ಯೋಜನೆಯಲ್ಲಿ ಒದಗಿಸಿರುವ ಮೊತ್ತದಲ್ಲಿ ಸದರಿ 2500/-ಗಳನ್ನು ಮರು ಹೊಂದಾಣಿಕೆ ಮಾಡುವ ಷರತ್ತಿನೊಂದಿಗೆ ಅನುಮೋದಿಸಿ, ಇದರಿಂದ ಎಸ್ ಸಿ/ಎಸ್ ಟಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಪ್ರೋತ್ಸಾಹ ನೀಡಲು ಸಹಮತಿಸಲಾಯಿತು."<br>ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ದಿನಾಂಕ: 01.04.2025ರಂದು ನಡೆದ ಹಣಕಾಸು ಸಮಿತಿ ಸಭೆಯ ನಿರ್ಣಯದಂತೆ ಕ್ರಮವಹಿಸಲು ಸಭೆಯು ಅನುಮೋದಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು** |
| ವಿಷಯ 01 | **"ಶಾಸ್ತ್ರೋತ್ಸವ" – 2024-25ನೇ ಸಾಲಿನ ರಾಷ್ಟ್ರಮಟ್ಟದ ಸಂಸ್ಕೃತ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ವಿಜೇತರಾಗಿ "ವಿಜಯ ವೈಜಯಂತಿ" ಪುರಸ್ಕಾರ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ.** |
| | ರಾಷ್ಟ್ರಿಯ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿವರ್ಷದಂತೆ 2024-25ನೇ ಸಾಲಿನ ರಾಷ್ಟ್ರಮಟ್ಟದ ಸಂಸ್ಕೃತ ಶಾಸ್ತ್ರೀಯ ಸ್ಪರ್ಧೆ "ಶಾಸ್ತ್ರೋತ್ಸವ"ವನ್ನು ಹರಿದ್ವಾರದಲ್ಲಿ ಆಯೋಜಿಸಿತ್ತು. ವಿವಿಧ ಸ್ತರದ 32 ಸ್ಪರ್ಧೆಗಳಲ್ಲಿಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸಿದ ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜಿನ ವಿದ್ಯಾರ್ಥಿಗಳು ಅತಿ ಹೆಚ್ಚು ಬಹುಮಾನ ಪಡೆದು ಕರ್ನಾಟಕ ರಾಜ್ಯಕ್ಕೆ ಸರ್ವಪ್ರಥಮ ಸ್ಥಾನದ ಕೀರ್ತಿಯೊಂದಿಗೆ "ವಿಜಯ ವೈಜಯಂತಿ" ಪುರಸ್ಕಾರ ಪಡೆದಿರುತ್ತಾರೆ. ಸತತವಾಗಿ 25 ಕ್ಕೂ ಹೆಚ್ಚು ವರ್ಷಗಳಿಂದ ರಾಜ್ಯಕ್ಕೆ "ವಿಜಯ ವೈಜಯಂತಿ" **(Rolling Shield)** |

| | |
|---|---|
| | ಪುರಸ್ಕಾರ ಲಭಿಸುತ್ತಿರುವುದು ರಾಜ್ಯದಲ್ಲಿ ಸಂಸ್ಕೃತ ಶಿಕ್ಷಣದ ಉತ್ಕೃಷ್ಟತೆಗೆ ಕೈಗನ್ನಡಿ. ಆದ್ದರಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 2024-25ನೇ ಸಾಲಿನ ರಾಷ್ಟ್ರಮಟ್ಟದ ಸಂಸ್ಕೃತ ಶಾಸ್ತ್ರೀಯ ಸ್ಪರ್ಧೆ "ಶಾಸ್ತ್ರೋತ್ಸವ"ದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | "ಶಾಸ್ತ್ರೋತ್ಸವ" - 2024-25ನೇ ಸಾಲಿನ ರಾಷ್ಟ್ರಮಟ್ಟದ ಸಂಸ್ಕೃತ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ವಿಜೇತರಾಗಿ "ವಿಜಯ ವೈಜಯಂತಿ" ಪುರಸ್ಕಾರ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಭೆಯು ಅನುಮೋದಿಸಿತು. |

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.
ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಡಾ. ಅಹಲ್ಯಾ ಎಸ್.
ಕುಲಪತಿಗಳು
ಅಧ್ಯಕ್ಷರು